ಪ್ರಶಾಂತತೆ ಸ್ಥಿರವಾಯಿತು.

ಮಹಾರಾಜನು ಆಸ್ಥಾನ ಪ್ರವೇಶಿಸಿ ಆಸೀನನಾಗುತ್ತಿದ್ದಂತೆಯೇ ಮೂವರತ್ತ ಕಣ್ಣುಹಾಯಿಸಿದನು. ಮೂವರ ಮುಖದಲ್ಲಿಯ ದಿವ್ಯ ಪ್ರಶಾಂತತೆಗೆ ಅವನ ದೇಹದಲ್ಲಿ ಸಣ್ಣ ಕಂಪನವೊಂದು ಹಾದು ಹೋಯಿತು. ನ್ಯಾಯಾಧಿಕಾರಿಯು ಮೂವರ ಮೇಲಿನ ಆರೋಪಪಟ್ಟಿಯನ್ನು ಓದುತ್ತಿರುವಂತೆಯೇ ಕಿರಿಯರಾಣಿ ಏನನ್ನೋ ನಿವೇದಿಸಿಕೊಳ್ಳಲು ಮಧ್ಯಪ್ರವೇಶಿಸಿದಾಗ ಮಾಹಾರಾಜನು ಕೈಯೆತ್ತಿ, ''ನನಗೆಲ್ಲವೂ ಅರ್ಥವಾಗಿದೆ, ಸಾಕು'' ಎಂದು ಅಬ್ಬರಿಸಿದನು. ಮಹಾರಾಜನ ಧ್ವನಿಗೆ ಇಡೀ ಸಭೆಯೇ ನಲುಗಿತು. ಎಷ್ಟೋ ಹೊತ್ತಿನವರೆಗೆ ಎತ್ತಿಯೇ ಇದ್ದ ಮಹಾರಾಜನ ಬಲಿಷ್ಠ ಬಾಹುಗಳು ನಂತರದಲ್ಲಿ ಶಿಥಿಲವಾದ ಕಂಬದಂತೆ ನಿಧಾನವಾಗಿ ಕೆಳಗಿಳಿದವು. ಒಮ್ಮೆಲೇ ಎದ್ದುನಿಂತನು. ಇಡೀ ಸಭೆಯೇ ಎದ್ದು ನಿಂತಿತು. ಮೂವರ ರುಂಡಗಳು ಉರುಳುವ ಸನ್ನಿವೇಶವನ್ನು ಕಲ್ಪಿಸಿಕೊಂಡು ಸಭೆ ಕಂಪಿಸತೊಡಗಿತು. ಸಿಂಹಾಸನದಿಂದ ಒಂದೊಂದೇ ಹೆಜ್ಜೆ ಕೆಳಗಿಳಿದ ಮಹಾರಾಜನು ಮಧುರಮತಿಯ ಬಳಿ ಬಂದು ತನ್ನ ಸೊಂಟಪಟ್ಟಿಗೆ ಸಿಲುಕಿಸಿದ ಕಾವ್ಯಲಿಖಿತ ವಸ್ತ್ರವನ್ನು ಅರ್ಪಿಸಿ, ''ಮಹಾಕವಿಗಳಿಗೆ ಸ್ವರಚಿತ ಕಾವ್ಯ ಅರ್ಪಿಸುತ್ತಿದ್ದೇನೆ, ಸ್ವೀಕರಿಸಬೇಕು'' ಎಂದನು. ''ಹಾಗೆ ನೋಡಿದರೆ ಸ್ವರಚಿತ ಸ್ವಲಿಖಿತ ಅನ್ನುವುದೇನೂ ಇಲ್ಲ, ಎಲ್ಲವೂ ವಿಧಿಲಿಖಿತ, ಬಹುಶಃ'' ಎಂದು ಕೈಮುಗಿದನು! ಜನರಿಗೆ ಏನಾಗುತ್ತಿದೆಂಬುದೇ ತಿಳಿಯಲಿಲ್ಲ. ತಲೆ ಉರುಳಬೇಕಾದ ವ್ಯಕ್ತಿಗೆ ಕೈ ಮುಗಿವುದೇ!



ಸೇನಾಪತಿಯ ಬಳಿ ನಿಂತು ಜೈಭವಾನಿ ಅನುಗ್ರಹಿತ ಖಡ್ಗವನ್ನು ಸೊಂಟದಿಂದ ಹೊರತೆಗೆದನು. ಇನ್ನು ಸೇನಾಪತಿಯ ರುಂಡ ಧರೆಗೆ ಬೀಳುತ್ತದೆ ಎಂದುಕೊಂಡಾಗ ಖಡ್ಗವನ್ನು ಅವನ ಕೈಗಳಲ್ಲಿಟ್ಟು, ''ಎಲ್ಲ ಬಾಹ್ಯ ಆಯುಧಗಳು ವ್ಯರ್ಥ, ಯಾವ ಆಯುಧವೂ ನಮ್ಮೊಳಗನ್ನು ರಕ್ಷಿಸಲಾರದು, ಸೇನಾಪತಿಯಾದ ನಿನ್ನಲ್ಲೇ ಇದು ಇರಲಿ'' ಎಂದನು. ಸದ್ಯ ತಾನು ಬಗೆದಂತೆ ಇಬ್ಬರ ಜೀವವೂ ಉಳಿಯಿತು. ಇನ್ನು ಸಾವಿನಲ್ಲೂ ಸಮಾಧಾನದಲ್ಲಿರಬಲ್ಲೆ ಎಂದು ಕಿರಿಯ ರಾಣಿ ಕಣ್ಣುಮುಚ್ಚಿ ನಿಂತಳು. ''ಎಲ್ಲವೂ ಅರ್ಥವಾಗಿದೆ ಎಂದೆ. ನಿಜವೆಂದರೆ ನನಗೇನೂ ಅರ್ಥವಾಗಿಲ್ಲ ಎನ್ನುವುದು ಮಾತ್ರ ಅರ್ಥವಾಗಿದೆ... ಇದನ್ನು ನೀನು ಧರಿಸು'' ಎಂದು ತನ್ನ ಕಿರೀಟವನ್ನು ತೆಗೆದು ಕಿರಿಯ ರಾಣಿಯ ತಲೆಮೇಲಿಟ್ಟನು. ಜನ ಸ್ಥಂಭೀಭೂತರಾಗಿರುವಂತೆಯೇ ವಿಜಯಶೇಖರನು ದೊಡ್ಡ ಹೆಜ್ಜೆಗಳನ್ನಿಡುತ್ತಾ ಆಸ್ಥಾನದಿಂದ ಹೊರನಡೆದನು. ಅರಮನೆಯ ಮಹಾದ್ವಾರವನ್ನೂ ದಾಟಿ ರಾಜಬೀದಿಯಲ್ಲಿ ನಡೆದು, ಕೋಟೆ ಬಾಗಿಲಿಂದ ಆಚೆ ಎದುರಾದ ಬಯಲಲ್ಲಿ ಮುನ್ನಡೆದನು!

ಇತ್ತ ಅರಮನೆಯೊಳಗಿನ ಅರಾಜಕತೆಯಲ್ಲಿ ಹೊಸ ಹೊಸ ಕಥೆಗಳೇ ಹುಟ್ಟಿಕೊಂಡವು.

## ರಾಜೀವ ನಾರಾಯಣ ನಾಯಕ

ಪ್ರಸ್ತುತ ಮುಂಬಯಿಯಲ್ಲಿ ಕೇಂದ್ರ ಸರ್ಕಾರದ ಸೇವೆಯಲ್ಲಿರುವ ರಾಜೀವ ಅವರ ಕಥಾ ಸಂಗ್ರಹ 'ಗುರ್ಬಾಣಕ್ಕಿ'. ಮುಂಬಯಿ ಕರ್ನಾಟಕ ಸಂಘ ಇದನ್ನು ಪ್ರಕಟಿಸಿದೆ. ಅವರು ಮುಂಬಯಿಯ ಕನ್ನಡ ರಂಗಭೂಮಿಯಲ್ಲೂ ಸಕ್ರಿಯರು.